# <u>ಯಮನ ಶಾಸನ ಕೇಳೊ ಜೀವ ಇದು</u>

ಈ ಕೃತಿಯಲ್ಲಿ ಯಾವ ಪಾಪಕ್ಕೆ ಯಾವ ಶಿಕ್ಷೆ ಎನ್ನುವ ಶ್ರೀ ಗರುಡ ಪುರಾಣದ ಶಿಕ್ಷೆಗಳ ಪಟ್ಟಿಯ ಉಲ್ಲೇಖವನ್ನು ಅದ್ಭುತವಾಗಿ ತಿಳಿಸಿದ್ದಾರೆ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 472.
2. **Note:** The lyrics fully matches with the singer.
3. **Note:** This song is not available in the books of Shri Betageri Krishna Sharma and Shri Bengeri Huchha Rayaru and also in the book of Prof. S.K. Ramachandra Rao and also in the books of Samagra Dasa Sahitya, published by Kannada & Culture Dept., Govt of Karnataka, Bengaluru and also in the books of Gorebala Hanumantha Rayaru.

ರಾಗ ಯದುಕುಲ ಕಾಂಭೋಜ ತಾಳ ಅಟ

ಯಮನ ಶಾಸನ ಕೇಳೊ ಜೀವ ಇದು
ಸಂಶಯವಿಲ್ಲೆಂದು ಎಣಿಸು ಸ್ವಭಾವಾ || ಪ ||

ಪರ ಸತಿಯರ ನೋಡಿದವಗೆ ಪತ್ತು
ಕೊರಡು ಕೆಂಪಗೆ ಕಾಸಿ ಕುಕ್ಕಿ ಕಣ್ಣೊಳಗೆ
ಎರಡು ಗುಡ್ಡನು ಪೀಕೋರವಗೆ ಕರಗಿಸಿ
ಸೀಸವ ಪೊಯ್ಯುವರೊ ಅವನ ಕಿವಿಯೊಳಗೆ || 1 ||

ಅನ್ಯ ಸ್ತ್ರೀ ಪುರುಷರ ಸಂಗ
ತನ್ನವರ ಕುಲ ಅಳಿಸಿಟ್ಟು ಹಾಕುವರಂಗ
ನರಕಕ್ಕೆ ಗುರಿ ಮಾಡಿ ತುಂಗ
ಕೆಂಡ ಉರಿವ ಉಕ್ಕಿನ ಕಂಭ ಕಟ್ಟೆಪ್ಪ ಭಂಗ || 2 ||

ಪರಸತಿ ಮೆರೆವೋದು ಕಂಡು ಗಾಣ
ಒರಳೊಳಗಾಡಿಸಿ ಒಣಗಿಸಿ ಬೆಂಡು

ಉರಿ ತೈಲದೊಳಗೆ ಹಾಕಿ ಗುಂಡು ಕರಿದ
ತೆರನಾಗಿ ಹಂದಿಯ ತಿನಿಸುವ ಖಂಡು || 3 ||

ಅನ್ಯ ಸ್ತ್ರೀ ವಿಚಾರ ಮೋಹವಿಟ್ಟಿಹ
ಘನ್ನ ಘಾತಕಗೆ ಗಳರಂತೆನೀಹ
ಬೆನ್ನ ಚರ್ಮವ ಕಿತ್ತಿ ದೇಹ
ಕುಟ್ಟಿ ಘೋರಿಸಿ ಬಾಧಿಸಿ ಕಾಡಲಿಕ್ಕೆ ಬಹ || 4 ||

ಗಂಡನಿಂದಲಿ ಕೆಲಸ ಮಾಡಿ
ಕೊಂಡ ಹೆಂಡಿರಿಗೆ ಖಡುಹಿಡಿದವರ ಕಾಡಿ
ಮಂಡೆ ಕೂದಲು ಇನ್ನು ಕಿತ್ತೀಡ್ಯಾಡಿ
ಖಂಡ ಖಂಡವ ಕಿತ್ತಿ ದಂಡಿಪ್ಪ ನೋಡಿ || 5 ||

ಅತಿಕಾಂಕ್ಷ ಸ್ತ್ರೀಯರಲ್ಲಿಂದ ಜನ್ಮದ
ಸದ್ಗತಿ ಕೇಳದೋ ಅತಿ ಕ್ರೂರದಿಂದ
ರಣಹದ್ದು ಗುಂಪು ಜತೆಯಿಂದ
ಪೀಡಿ ಪೀಡಿಸುವನು ಮುದದಿ ಮುಕುಂದ || 6 ||

ಇನ್ನು ಪಾಪಗಳ ನೀ ಮಾಡಬೇಡ
ಅನ್ಯರ ಗೊಡವೆಗೆ ನೀ ಹೋಗಬೇಡ
ಸಜ್ಜನರ ಸಂಗ ಬಿಡಬೇಡ ಚೆನ್ನ
ಪುರಂದರ ವಿಠಲನ್ನ ಭಜಿಸದಿರಬೇಡ || 7 ||

**Classification:** Keerthane
**Ankita:** purandara vittala
**Location:** NA
**Category:** Jeevana Sutra, Garuda Purana Vichara
**Group Words:** yama, jiva, garuda, purana, sati, hennu, kannu, kivi, naraka, deha, pati, patni, janma, mukunda, papa, bhajane, anumana,
**Pravachana:** NA
**Explanation:** NA